

ವೈಭವದ ಬೆಂಗಳೂರು ಕರಗ ಚಿತ್ರ: ರಂಜು ಪಿ.

ಚಿರನೂತನ ಅಲ್ವಾ ನಮ್ಮೂರು... ಈಗೀಗ ನಮ್ಮ ಬೆಂಗಳೂರು ಬದಲಾಗುತ್ತ ಇದೆ ಅಲ್ವೇನ್ರೀ ಅಂದ್ರು. **Network** ಹೋಗಿ ಕರೆ **Cut** ಆಯ್ತು. ನಾನು ಮನಸಲ್ಲಿ ಅವರ ಪ್ರಶ್ನೆಗೆ ಉತ್ತರಿಸಿಕೊಂಡೆ.

'ಹೌದು ಹೌದು ಮಸ್ತ್ ಮಜ ಮಾಡಿ ಸಖತ್ ಹಾಟ್ ಮಗ ನಂಗ್ ಕನ್ನಡ್ ಗೊತ್ತಿಲ್ಲ ಜೊತೆ ಈಗ ಏನೇನೇನೋ ಕೇಳಿಸುತ್ತೆ...' 'ಭಾಷೆ ವಿರೂಪಗೊಂಡರೆ ಅದು ಅನಿಷ್ಟ' ಎಂದು ಹೇಳಿದ ಸುಚೇಂದ್ರ ಪ್ರಸಾದ್ ಅವರ ಮಾತು ನೆನಪಾಯಿತು. ಬೆಂಗಳೂರು ಕನ್ನಡದ ಬಗ್ಗೆ ಇವೆಲ್ಲಾ ಬರೆಯಬೇಕು ಅನಿಸಿತು. ಬೆಂಗಳೂರು ಒಂದು ಮಿನಿ ಭಾರತ ಎಂದು ಹೇಳಬೇಕೆನಿಸಿತು. 1962ರಲ್ಲಿ ಅನಕೃ ಮತ್ತು ಮ ರಾಮಮೂರ್ತಿ ಚಳವಳಿ ಮಾಡಿದ್ದರು. ಎನ್ನಡ ಎಕ್ಕಡ ನಡುವೆ ಎಲ್ಲಿದೆ ಕನ್ನಡ ಎಂದು ಪ್ರಶ್ನಿಸಿದ್ದರು.

1911ರಲ್ಲಿ ಕನ್ನಡದ ಕಣ್ವ ಬಿಎಂಶ್ರೀ ಅವರು 'ಕನ್ನಡವೇ ಪರಮ, ಕನ್ನಡ ತಲೆ ಎತ್ತಿ ನಿಲ್ಲಬೇಕು' ಎಂದು ಭಾಷಣ ಮಾಡಿದ್ದರು. ಬೆಂಗಳೂರಿನಲ್ಲಿ ಕನ್ನಡ ಸರಿಯಾಗದ ಹೊರತು ರಾಜ್ಯದ ಇತರ ಭಾಗಗಳಲ್ಲೂ ಕನ್ನಡಕ್ಕೆ ಪ್ರಾಧಾನ್ಯತೆ ಸಿಗಲಾರದು ಎಂದು ಹೇಳಿದ್ದರು ಆಲೂರು ವೆಂಕಟರಾಯರು.

ಬೆಂಗಳೂರು ಚಳವಳಿ ಬಗ್ಗೆ ಬರೆಯಲೇ, ಬೆಂಗಳೂರು ದೇವಸ್ಥಾನ ಉತ್ಸವ ಮೂಲ ಸಂಸ್ಕೃತಿ ಬಗ್ಗೆ ಬರೆಯಲೇ... ಶಿಕ್ಷಣ, ವಿಜ್ಞಾನ, ಆರ್ಥಿಕತೆ, ಐಟಿ ಬಿಟಿ, ಹವಾಮಾನ, ಸಂಸ್ಕೃತಿ, ಸಂಗೀತ... ಎಲ್ಲ ಬರೀಬೇಕು ಎಂದು ಬರೆದುಕೊಂಡೆ.

ಬಸ್ ಇಳಿದೆ. ಕಾಫಿ ಕುಡಿಯೋಣ ಎಂದು ಅಲ್ಲೇ ಇದ್ದ ಒಂದು ದರ್ಶಿನಿಗೆ ಹೋದೆ. ಹಿರಿಯರು ಇಬ್ಬರು ಆನಂದವಾಗಿ ಹೇಳುತ್ತಿದ್ದರು. 'ನೀವೇನೇ ಹೇಳಿ, ಜಗತ್ತಿನ ಯಾವ ಭಾಗದಲ್ಲೂ ಬೆಂಗಳೂರಿನಲ್ಲಿ ಸಿಗುವಷ್ಟು ಚೆಂದದ ಶುದ್ಧ ಆಹಾರ ಸಿಗೊಲ್ಲ ನೋಡಿ... ಪಾನೀಪುರಿಯಿಂದ ಪಿಜ್ಜಾವರೆಗೆ... ಇಡ್ಲಿ, ದೋಸೆ, ಚಿತ್ರಾನ್ನ ರೊಟ್ಟಿ ಸೌತು, ನಾರ್ತ್, ವಿದೇಶೀ ಆಹಾರ ಏನು ಬೇಕಾದ್ರೂ ಸಿಗುತ್ತೆ... ಮುಸುಕಿನ ಜೋಳ ಕಡ್ಲೆಕಾಯಿ ಗಾಡಿಯಿಂದ ಈಗೀಗ ಮೊಮೊ ಗಾಡಿಗಳೂ ಕಾಣುತ್ತೆ ಅಂದರು.

ಗುಂಡಣ್ಣನ ಅಂಗಡೀಗೆ ಹೋಗಿದ್ದೆ, ತೊಗೊಳ್ಳಿ ಮೈಸೂರು ಪಾಕು ಅಂತ ಮತ್ತೊಬ್ಬರು ಪ್ಯಾಕೆಟ್ ಕೊಟ್ಟರು. ಬದಲಾದ ಬೆಂಗಳೂರಿನ ಚಹರೆಯ ಮಾತಿನ ಜೊತೆ ಮೈಸೂರು ಪಾಕು ಬೋಂಡ ಕಾಫಿ ಸವಿಯುತ್ತಿದ್ದರು.

ಬೆಂಗಳೂರಿನ ಕೆರೆಗಳೆಲ್ಲ 'ಕರೆಸೆಂಟರ್'ಗಳಾಗಿವೆ. ಬೆಂಗಳೂರು 'ಹೋಂಡಾ' ಸಿಟಿ ಆಗಿದೆ, ರಸ್ತೆಯಲ್ಲಿ ಹೊಂಡಗಳೇ! ಬೆಂಗಳೂರಿನಲ್ಲಿ ಎಲ್ಲಾ ಕಡೆ 'I LOVE BENGAOORU' ಎಂದು ಬೋರ್ಡ್ ಕಾಣಿಸುತ್ತದೆ. ಅವರ ಮಾತು ಮುಂದುವರೆದಿತ್ತು...



ಬೆಂಗಳೂರಿಗೆ ಹೊರಗಿನಿಂದ ಬಂದವರು ಸದಾ ಅವರವರ ಊರುಗಳನ್ನೇ ಹೊಗಳುತ್ತಿರುತ್ತಾರೆ. ಬೆಂಗಳೂರು ತುಂಬಾ ಟ್ರಾಫಿಕ್, ಇಲ್ಲಿ ಏನೂ ಇಲ್ಲ ಎಂದು ಹೇಳುತ್ತಾ ಓಡುತ್ತಾ ಇರುತ್ತಾರೆ. ಬೆಂಗಳೂರು ಅವರಿಗೆ ಏನು ಕೊಟ್ಟಿದೆ ಎಂದು ನಿಂತು ಚಿಂತಿಸುವ ವ್ಯವಧಾನ ಅವರಿಗಿಲ್ಲ. ತಪ್ಪದೇ ಅವರ ಊರುಗಳಿಗೆ ಹೋಗಿ ಬರುತ್ತಾರೆ. ಬೆಂಗಳೂರಿನಲ್ಲಿ ವಿವಿಧ ರೀತಿಯ ಅವರವರ ಊರುಗಳ ಉತ್ಸವಗಳನ್ನು ನಡೆಸುತ್ತಾರೆ. 20, 25, 30 ವರ್ಷಗಳಿಂದ ಬೆಂಗಳೂರಿನಲ್ಲಿಯೇ ನೆಲೆಸಿದ್ದರೂ ಯಾರಿಗೂ ಬೆಂಗಳೂರು 'ನಮ್ಮ ಊರು' ಎಂದು ಅನಿಸುವುದೇ ಇಲ್ಲ.

ನಾನು ಕೇಳುತ್ತೇನೆ 'ನಿಮಗೆ ಹೋಗಲು ನಿಮ್ಮ ಊರಿದೆ. ನೀವೆಲ್ಲಾ ನಮ್ಮ ಊರಿಗೆ ಬಂದಿರಿ, ನನಗೆ ಹೋಗಲು ಊರಿಲ್ಲ. ಇದು ನನ್ನ ಊರು. ನಿಮ್ಮ ಊರೂ ಆಗಲಿ. ಬೆಂಗಳೂರನ್ನು ಪ್ರೀತಿಸಿ. ಬೆಂಗಳೂರಿನಲ್ಲಿ ಈಗಲೂ ಸುಂದರ ಸೂರ್ಯೋದಯ, ಸೂರ್ಯಾಸ್ತ ಕಾಣುತ್ತದೆ. ವಾಹನಗಳ ಸದ್ದಿನ ನಡುವೆ ಕೋಗಿಲೆಯ ಕೂಹೂ ಗಾನ ಕೇಳಿಸುತ್ತದೆ. ಟ್ರಾಫಿಕ್ ಜಾಮ್ ನಡುವೆ ಮಜ್ಜಿಗೆ ತಂದುಕೊಡುವ ಹುಡುಗರಿದ್ದಾರೆ. ಬೆಂಗಳೂರು ಕರ್ನಾಟಕಕ್ಕೆ ಕಳಸಪ್ರಾಯ. ಹೀಗೆ ಬರೆಯಬೇಕು ಎಂದುಕೊಂಡೆ.

'ಇಡೀ ಕರ್ನಾಟಕದ ಸೌಜನ್ಯವೇ ಮೂರ್ತಿವೆತ್ತಿರುವುದು ಬೆಂಗಳೂರಿನಲ್ಲಿ. ಬೆಂಗಳೂರಿನ ಸೌಜನ್ಯದ ಮಾತು, ಪ್ರೀತಿಯ ಹೃದಯ ನಿಮಗೆ ಅರ್ಥವಾಗದಿದ್ದರೆ, ನಿಮಗೆ ಏನೂ ಅರ್ಥ ಆಗಲು ಸಾಧ್ಯವಿಲ್ಲ.' ಮೂರ್ತಿ ಸರ್ ಸಂದೇಶ ಕಳಿಸಿದ್ದರು. ಹೀಗೆ ಆರಂಭಿಸಿ ಎಂದು.

ನನಗೆ ಇನ್ನೂ ಗೊಂದಲವೇ ಕಾಡುತ್ತಿತ್ತು. ಬೆಳೆದಿದೆ ನೋಡಾ ಬೆಂಗಳೂರು ನಗರಾ... ಅಥವಾ ಕಳೆದಿದೆ ನೋಡಾ ಬೆಂಗಳೂರು ನಗರಾ... ಯಾವುದು ಸರಿ? ಎಂದು. ಮನೆ ಕಡೆ ಹೆಜ್ಜೆ ಹಾಕಿದೆ.